ನಿಂದನೆಗೆ ಗುರಿಯಾಗುವಿರಿ', ಮನೆ ಮಾಲೀಕ ಕಟುಸತ್ಯವನ್ನು ಹೇಳುತ್ತಿದ್ದಾಗ್ಯೂ, ನಮ್ಮಿಬ್ಬರಿಗೆ ಅದು ಅಶ್ಲೀಲವಾಗಿ ಕಂಡಿತು.

ನೀವೆಷ್ಟು ಕೊಳಕಾಗಿ ಯೋಚಿಸುತ್ತೀರ' ರಿತಿಕ್ ಬೇಸರದಿಂದ ಹೇಳಿದ.

'ನಾನು ಯೋಚ್ನೆ ಮಾಡಲ್ಲ. ನಾನು ನಿಮ್ಮಿಬ್ಬರಿಗೆ ಸಮಾಜದ ಚಿತ್ರಣವನ್ನು ತೋರಿಸುತ್ತಿದ್ದೇನೆ. ನಾನು ನನ್ನ ಮನೆಯಲ್ಲಿ ಬೆತ್ತಲೆಯಾಗಿ ಅಲೆದಾಡಿದರೆ, ಯಾರೂ ಕೇಳಲ್ಲ. ಆದರೆ ರಸ್ತೆಯಲ್ಲಿ ಬೆತ್ತಲೆಯಲ್ಲಿ ಹೋದರೆ, ನೀವೇ ನನ್ನನ್ನು ತಡೆಯುತ್ತೀರ'. ಮನೆ ಮಾಲೀಕನ ಈ ತರ್ಕ ವಿಚಿತ್ರವಾಗಿತ್ತು. ನಾವು ಈ ತರ್ಕದ ಉತ್ತರದಲ್ಲಿ ಕುತರ್ಕವನ್ನಂತೂ ಮಾಡಬಹುದಿತ್ತು, ಆದರೆ ಇದು ವ್ಯರ್ಥ ಪ್ರಯತ್ನವಾಗುತ್ತಿತ್ತು.



'ಯಾರಾದರು ಒಬ್ಬರು ಇದನ್ನೆಲ್ಲಾ ಬದಲಿಸಬೇಕಾಗುತ್ತೆ', ರಿತಿಕ್ ನಿಟ್ಟುಸಿರು ಬಿಡುತ್ತಾ ದಣಿದವನಂತೆ ಹೇಳಿದ್ದ.

'ಖಂಡಿತ, ಆದರೆ ನೀವಿಬ್ಬರು ಮಾತ್ರವೇ ಬದಲಾವಣೆಯ ಧ್ವಜವನ್ನೇಕೆ ಹಿಡಿದು ನಿಂತಿದ್ದೀರ? ನನ್ನ ಮಾತು ಕೇಳಿ, ನೀವಿಬ್ಬರು ಮದುವೆ ಮಾಡಿಕೊಳ್ಳಿ... ಹಾಂ, ನಾನೀಗ ಕೊಟ್ಟ ಲೆಕ್ಚರ್‌ಗೆ ನೀವು ಅನ್ಯಥಾ ಭಾವಿಸಬೇಡಿ. ನಾನು ನಿಮ್ಮಿಬ್ಬರನ್ನು ಇಷ್ಟಪಡುತ್ತೇನೆ' ಎಂದ ಮನೆಯ ಮಾಲೀಕ. ನಂತರ ಒಂದು ಕ್ಷಣದ ನಂತರ ಹೇಳಿದ, 'ನನ್ನ ಹೆಂಡತಿ ಸಹ ನಿಮ್ಮಿಬ್ಬರನ್ನು ಇಷ್ಟಪಡಲೆಂದು ನಾನು ಬಯಸುತ್ತೇನೆ'.

ಕೊನೆಯ ವಾಕ್ಯದಿಂದ ನಮಗೆ ಮನೆ ಮಾಲೀಕನ ಅಭಿಪ್ರಾಯ ಸ್ಪಷ್ಟವಾಯಿತು. ಅವನ ಹೆಂಡತಿಗೆ ನಾವು ಮದುವೆಯಾಗದಿರುವುದು ಸರಿ ಕಾಣಬಂದಿರಲಿಲ್ಲ.

'ನನಗೆ ಅರ್ಥವಾಯ್ತು' ಎಂದು ರಿತಿಕ್ ಮುಗುಳ್ನಕ್ಕ.

ಅಂದು ನಾವು ಮನೆ ಮಾಲೀಕನ ಹೆಂಡತಿಯ ಬಗ್ಗೆ ನಾನಾ ರೀತಿಯಲ್ಲಿ ಚರ್ಚಿಸಿದೆವು. ನನ್ನ ಚರ್ಚೆ ಸಮಾಜದ ಪೊಳ್ಳುತನದ ಬಗ್ಗೆ ಇತ್ತು; ರಿತಿಕ್ ಮಹಿಳೆಯರ ಪುಕ್ಕಲುತನದ ಬಗ್ಗೆ ಚರ್ಚಿಸಿದ್ದ.

'ಪ್ರತಿಯೊಬ್ಬ ಹೆಣ್ಣು ಹೇಡಿಯಾಗಿರುವುದಿಲ್ಲ', ನಾನು ಪ್ರತಿವಾದ ಮಾಡಿದ್ದೆ.

'ಆದರೆ ಪರಾಕ್ರಮಿಯೂ ಆಗಿರುವುದಿಲ್ಲ.'

'ಪರಾಕ್ರಮಿ ಎಂದರೆ?' ನಾನು ಕೇಳಿದ್ದೆ.

'ಬೇರೊಬ್ಬ ಮಹಿಳೆಯ ಸ್ವಾತಂತ್ರ್ಯವನ್ನು ನೋಡಿ ಸಹಿಸುವುದಿಲ್ಲ' ಎಂದಿದ್ದ ರಿತಿಕ್.

'ಪುರುಷನಾದರೂ ಎಲ್ಲಿ ಸಹಿಸುತ್ತಾನೆ? ಅವನ ಹೆಂಡತಿ ಬೇರೊಬ್ಬ ಪುರುಷನೊಂದಿಗೆ ಮಾತನಾಡುತ್ತಿರುವುದನ್ನು ನೋಡಿದರೆ, ಅವನ ಎದೆಯಲ್ಲಿ ವಿಷ ಸರ್ಪ ಹೆಡೆಯಾಡುತ್ತದೆ', ನಾನು ನಕ್ಕು ಹೇಳಿದ್ದೆ.

'ಅಂದರೆ ಇದರರ್ಥ, ಅನೇಕ ಪುರುಷರೊಂದಿಗೆ ಸಂಬಂಧವನ್ನು ಬೆಳೆಸಲು ಮಹಿಳಾಸ್ವಾತಂತ್ರ್ಯದ ನಗಾರಿಯನ್ನು ಬಾರಿಸಲಾಗುತ್ತದೆ ಎಂದಾಯಿತು', ರಿತಿಕ್ ಸಿಡಿಮಿಡಿಗೊಂಡು ಹೇಳಿದ್ದ.

'ಪುರುಷರು ಸಹ ಅನೇಕ ಮಹಿಳೆಯರೊಂದಿಗೆ ಸಂಬಂಧವನ್ನು ಬೆಳೆಸುವ ಕೆಲಸವನ್ನು ಶತಮಾನಗಳಿಂದ ಮಾಡುತ್ತಾ ಬರುತ್ತಿದ್ದಾರೆ', ನಾನು ಸಹ ಚರ್ಚೆಯ ಮೂಡಿನಲ್ಲಿದ್ದೆ.

'ಸರಿ, ನಾಳೆಯಿಂದ ನೀನು ನಿತ್ಯ ಒಬ್ಬ ಪುರುಷನನ್ನು ನಿನ್ನೊಂದಿಗೆ ರಾತ್ರಿ ಕಳೆಯಲು ಕರೆದುಕೊಂಡು ಬರುತ್ತೀರು', ರಿತಿಕ್ ಅನಿರೀಕ್ಷಿತವಾಗಿ ಕುಟುಕಿದ್ದ.

'ನೀನೇಕೆ ಪ್ರತಿಯೊಂದನ್ನು ವೈಯಕ್ತಿಕ ಮಟ್ಟದಲ್ಲಿ ತೆಗೆದುಕೊಳ್ಳೀಯ?' ನಾನು ರೇಗಿದೆ, 'ನೀನು ಮೊದಲು ಹೀಗಿರಲಿಲ್ಲ'.

'ನಾನು ಸದಾ ಹೀಗಿಯೇ ಇದ್ದೇನೆ, ತಿಲೀತಾ! ನೀನು ಒಂದು ವೇಳೆ ಅನೇಕರೊಂದಿಗೆ ಸೆಕ್ಸ್ ಮಾಡಲು ಬಯಸಿದರೆ, ನನ್ನ ಕಡೆಯಿಂದ ನೀನು ಸ್ವತಂತ್ರಳು', ರಿತಿಕ್ ವಿಷ ಕಾರುವುದನ್ನು ನಿಲ್ಲಿಸಲಿಲ್ಲ.

'ಇನ್ನು ಸಾಕು ನಿಲ್ಲಿಸು. ನನಗಿದೆಲ್ಲಾ ಬೇಡ. ನೀನೀಗ ಚರ್ಚೆಯನ್ನು ನಿಲ್ಲಿಸಿ ಬೇರೆ ವಿಷಯವನ್ನು ಮಾತನಾಡಿದರೆ ಒಳಿತು'. ನಾನು ಸಹ ಶುಷ್ಕ ಧ್ವನಿಯಲ್ಲಿ ಹೇಳಿದ್ದೆ. ನನ್ನ ಈ ಮಾತಿನ ಧಾಟಿ, ರಿತಿಕ್ ಮುಂದಕ್ಕೆ ಮಾತನಾಡುವುದನ್ನು ತಡೆಯುತ್ತದೆ ಎಂಬುದು ನನಗೆ ತಿಳಿದಿತ್ತು.

'ಸರಿ, ನಾನು ಹೋಗಿ ಹೋಟೇಲ್‌ನಿಂದ 'ಪನೀರ್‌ಪಸಂದಾ' ತರ್ತೀನಿ, ಅಷ್ಟರಲ್ಲಿ ನೀನು ರೊಟ್ಟಿಗಳನ್ನು ಮಾಡು. ಇವತ್ತು 'ಪನೀರ್ ಪಸಂದಾ' ತಿನ್ನಬೇಕೆಂದು ಅನ್ನಿಸುತ್ತಿದೆ', ಹೀಗೆಂದು ರಿತಿಕ್ ಬರಮುಡ ಕಳಚಿ ಜೀನ್ಸ್ ಧರಿಸಿದ್ದ.

ಅಂದು ಸಂಜೆ ನಾವೆಲ್ಲರು ರಾಮಪುರ ಬಜಾರಿನಲ್ಲಿ ತುಂಬಾ ಹೊತ್ತು ಅಲೆದಾಡುತ್ತಿದ್ದೆವು. ನಾವು ಒಂದು ಸೊಳ್ಳೆಪರದೆಯನ್ನು ಕೊಳ್ಳಬೇಕಿತ್ತು. ಸೊಳ್ಳೆಪರದೆ ಹಾಕುವುದು ರಿತಿಕ್‌ಗೆ ಇಷ್ಟವಿರಲಿಲ್ಲ, ನನಗೂ ಇಷ್ಟವಿರಲಿಲ್ಲ. ಆದರೆ ರಾತ್ರಿ ಲೈಟ್ ಹೋದಾಗ 'ಆಲ್‌ಔಟ್' ಕೆಲಸ ಮಾಡುವುದನ್ನು ನಿಲ್ಲಿಸುತ್ತದೆ; ಆಗ ಮೂಲೆಗಳಲ್ಲಿ ಅಡಗಿದ್ದ ಸೊಳ್ಳೆಗಳು ಸಿಂಹದಂತೆ ನಮ್ಮ ಮೇಲೆ ಆಕ್ರಮಣವೆಸಗುತ್ತಿದ್ದವು. ಹೀಗಾಗಿ ನಾವು ಸೊಳ್ಳೆಪರದೆಯನ್ನು ಖರೀದಿಸಲು ನಿಶ್ಚಯಿಸಿದೆವು. ನಾವು ನೈಲಾನಿನ ಗುಲಾಬಿ ಬಣ್ಣದ ಸೊಳ್ಳೆಪರದೆಯನ್ನು ಕೊಂಡ ನಂತರ ಊಟ ಮಾಡಲು ಹೋಟೇಲ್‌ಗೆ ಹೋದೆವು. ಅಲ್ಲಿಗೆ ನಾವು ಸಾಮಾನ್ಯವಾಗಿ ಹೋಗುತ್ತಿದ್ದೆವು. ಅಲ್ಲಿಯ ಮ್ಯಾನೇಜರ್‌ನಿಂದ ಹಿಡಿದು ಮಾಣಿಗಳವರೆಗೆ ನಮ್ಮ ಪರಿಚಯವಿತ್ತು. 'ಪನೀರ್‌ಪಸಂದಾ' ಪನೀರಿನಿಂದ ಮಾಡುವ ಸಾಗು ಆಗಿದ್ದು, ರಿತಿಕ್‌ಕೆ ಇಷ್ಟವಾಗಿತ್ತು. ಅಂದು ರಾತ್ರಿ ಸಹ ನಾವು ತಂದೂರಿ ರೊಟ್ಟಿಯೊಂದಿಗೆ ಇದೇ ಸಾಗನ್ನು ತಿಂದಿದ್ದೆವು.

'ಬನ್ನಿ ಸಾರ್, ಬನ್ನಿ ಮೇಡಂ' ಎಂದು ನಮ್ಮನ್ನು ಹೋಟೇಲ್‌ನವರು ಸ್ವಾಗತಿಸಿದರು. ರಿತಿಕ್ ಸಹ ಅವರಿಗೆ ಹತ್ತುಇಪ್ಪತ್ತು ರೂಪಾಯಿಗಳನ್ನು ಟಿಪ್ಸ್ ಕೊಡುತ್ತಿದ್ದ. ರಿತಿಕ್ ಟಿಪ್ಸ್ ಕೊಡುವುದನ್ನು ಸಮರ್ಥಿಸುತ್ತಾ, 'ಇದು ಬಡ ಮಾಣಿಗಳ ಸಂಪಾದನೆಯ ಒಂದು ಸಾಧನವಾಗಿದೆ, ಇಲ್ಲದಿದ್ದರೆ ಮಾಲೀಕ ಕೊಡುವ ಸಂಬಳದಿಂದ ಇವರ ಅಥವಾ ಇವರ ಕುಟುಂಬ ನಡೆಯಲು ಸಾಧ್ಯವೇ?' ಎಂದು ತರ್ಕಿಸುತ್ತಿದ್ದ.

ಅಂದು ಸಹ ಆ ಮಾಣಿ ಸಂತಸದಿಂದ ನಮ್ಮನ್ನು ಸ್ವಾಗತಿಸಿದ. ಅವನು ಆರ್ಡರ್ ತೆಗೆದುಕೊಂಡು ಹೋದ ಸ್ವಲ್ಪ ಹೊತ್ತಿಗೆ ಊಟವನ್ನು ತಂದು ಮೇಜಿನ ಮೇಲಿಟ್ಟ. ಈ ನಡುವೆ ಸುಟ್ಟ ಹಪ್ಪಳ ಮತ್ತು ಟೊಮ್ಯಾಟೊ ಸೂಪ್ ಕುಡಿಯುತ್ತಾ ನಾವು ದೇಶ ಮತ್ತು ಜಗತ್ತಿನ ವಿಷಯಗಳನ್ನು ಹರಟುತ್ತಿದ್ದೆವು. ನಾವು ಆ ಅಲ್ಪ ಅವಧಿಯಲ್ಲಿ ರಾಜಕೀಯದ ಏರಿಳಿತ ಮತ್ತು ಭ್ರಷ್ಟಾಚಾರದ ಬಗ್ಗೆ ನಮ್ಮನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದೆವು. ದಿಲ್ಲಿಯ ರಾಜಕೀಯ ಭ್ರಷ್ಟಾಚಾರದಿಂದ ಹಿಡಿದು ನಮ್ಮನಮ್ಮ ಕಚೇರಿಗಳ ಭ್ರಷ್ಟಾಚಾರದವರೆಗೆ ಹರಟಿದ್ದೆವು.

'ಎಲ್ಲರೂ ಭ್ರಷ್ಟರೇ, ಇವರ ಹಿಂಭಾಗಕ್ಕೆ ಒದೆಯಬೇಕು', ರಿತಿಕ್ ನಿಂದನೆಯ ಧ್ವನಿಯಲ್ಲಿ